ಅಹಿಂಸೆಯಿಂದ ಸುಖ, ತ್ಯಾಗದಿಂದ ಶಾಂತಿ * ಮೈತ್ರಿಯಿಂದ ಪ್ರಗತಿ, ಧ್ಯಾನದಿಂದ ಸಿದ್ಧಿ *

# ಗೊಮ್ಮಟವಾಣಿ

44ನೇ ವರ್ಷದ ಪ್ರಕಾಶನದಲ್ಲಿ

ಸ್ಥಾಪನೆ : 01.01.1980 ಧಾರ್ಮಿಕ ಪಾಕ್ಷಿಕ ಪತ್ರಿಕೆ

ಅಂತಿಮ ಶ್ರುತಕೇವಲಿ ಶ್ರೀ ಭದ್ರಬಾಹು ಚರಣ

ದಿನಾಂಕ : 15.11.2023 : ಶ್ರವಣಬೆಳಗೊಳ ಪ್ರಧಾನ ಸಂಪಾದಕರು : ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಸ್ವಾಮಿಗಳವರು ವೀರಸಂವತ್ : 2550 ಪುಟಗಳು : 4

ಸಂಪುಟ : 17 ಸಂಚಿಕೆ : 22 ಸೋಪಾನ : 1049 RNI No. KARKAN/2008/28274 Postal Regn. No. HSN/765/2021-23 WPP : No. SK/wpp/HSN-109/2021-23

## ಜಿನಭಾಷಿತ

ಜಹ ದೀವಾ ದೀವಸಯಂ,
ಪಇಪ್ಪಏ ಸೋ ಯ ದಿಪ್ಪಏ ದೀವೋ ।
ದೀವಸಮಾ ಆಯರಿಯಾ,
ದಿಪ್ಪಂತಿ ಪರಂ ಚ ದೀವೇಂತಿ ॥ ಸಮಣಸುತ್ತಂ, ಸಿಕ್ಖಾಸುತ್ತಂ–7

ದೀಪವು ಸ್ವಯಂ ಬೆಳಗುತ್ತಾ ನೂರಾರು ದೀಪಗಳನ್ನು ಬೆಳಗಿಸುವಂತೆ, ಗುರುಗಳು ನಿರ್ಮಲ ಜ್ಞಾನದಿಂದ ಸ್ವತಃ ಪ್ರಕಾಶಿತರಾಗಿ ಇತರರನ್ನೂ ಪ್ರಕಾಶಗೊಳಿಸುವರು.

## ಶ್ರೀಕ್ಷೇತ್ರ ಶ್ರವಣಬೆಳಗೊಳ

: ವಿಂಧ್ಯಗಿರಿ ದರ್ಶನದ ಸಮಯ :
ಬೆಳಗ್ಗೆ 6–30 ರಿಂದ ಸಂಜೆ 6–00ರವರೆಗೆ
ಪೂಜಾ ಸಮಯ
ಬೆಳಗ್ಗೆ 8–00 ರಿಂದ ಬೆಳಗ್ಗೆ 10–00ರವರೆಗೆ
ದೂರವಾಣಿ : 9008954636

: ಶ್ರೀಮಠ ದರ್ಶನ ಸಮಯ :
ಬೆಳಗ್ಗೆ 6–30 ರಿಂದ ರಾತ್ರಿ 8–00ರವರೆಗೆ
ಪೂಜಾ ಸಮಯ
ಬೆಳಗ್ಗೆ 7–00 ರಿಂದ ಬೆಳಗ್ಗೆ 9–00ರವರೆಗೆ
ದೂರವಾಣಿ : 9844143722

: ಶ್ರೀಮಠದ ಕಛೇರಿ :
ದೂರವಾಣಿ : 8431560480

: ವಸತಿ ವಿಭಾಗದ ಕಛೇರಿ :
ದೂರವಾಣಿ : 9353667645

: ಅಕ್ಷಯ ಶ್ರಾವಕ ಸತ್ಕಾರ ಭೋಜನಾಲಯದ ಸಮಯ :
ಉಪಹಾರ : ಬೆಳಗ್ಗೆ 08.00 ರಿಂದ 09.30ರವರೆಗೆ
ಭೋಜನ : 10.30 ರಿಂದ ಮಧ್ಯಾಹ್ನ 03.00
ಸಂಜೆ : 04.30 ರಿಂದ 06.30 ರವರೆಗೆ

**ಹೊರೆಕಾಣಿಕೆ ಸ್ವೀಕರಿಸಲಾಗುವುದು**

ವರ್ಣಮುದ್ರಿತ ಗೊಮ್ಮಟವಾಣಿ ಪತ್ರಿಕೆ ನಿಮ್ಮ ಮನೆಗೆ ತಲುಪುತ್ತಿಲ್ಲವೇ....?
ಸಂಪರ್ಕಿಸಿ : 8660118443
ವಾರ್ಷಿಕ ಚಂದಾ : ರೂ. 250–00
ಆಜೀವ ಸದಸ್ಯತ್ವ : ರೂ. 2,500–00

ಶ್ರೀಕ್ಷೇತ್ರಕ್ಕೆ ಆಹಾರ, ಔಷಧ, ವಿದ್ಯಾದಾನಕ್ಕೆ ಈ ಕೆಳಕಂಡ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ದಾನ ನೀಡಬಹುದು

Paytm G Pay PhonePe

## ಗೊಮ್ಮಟವಾಣಿ ಕ್ಯಾಲೆಂಡರ್

2024ನೇ ವರ್ಷದ ಗೊಮ್ಮಟವಾಣಿ ಕ್ಯಾಲೆಂಡರ್‌ಗೆ ಜಾಹೀರಾತು ನೀಡಲಿಚ್ಛಿಸುವವರು ನವೆಂಬರ್–25ರ ದಿನಾಂಕದ ಒಳಗಾಗಿ ಕಳುಹಿಸಿಕೊಡುವುದು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಮೊ : 8660118443



## ಆಚಾರ್ಯ ಶ್ರೀ 108 ವಿದ್ಯಾಸಾಗರ ಮುನಿ ಮಹಾರಾಜರ ಆಶೀರ್ವಾದ ಪಡೆದ ಶ್ರೀ ನರೇಂದ್ರ ಮೋದಿಯವರು

ಛತ್ತೀಸಗಢ, ನ. 5 : ಮಾನನೀಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಡೊಂಗರ್‌ಘರ್‌ನ ಚಂದ್ರಗಿರಿಯ ಜಿನಮಂದಿರದಲ್ಲಿ ಚಾತುರ್ಮಾಸ ನಿರತ ಆಚಾರ್ಯ ಶ್ರೀ 108 ವಿದ್ಯಾಸಾಗರ ಮುನಿಮಹಾರಾಜರ ದರ್ಶನ ಮಾಡಿ ಆಶೀರ್ವಾದ ಪಡೆದರು.

## ಚಾರುಶ್ರೀ ವಾಣಿ



ಧರ್ಮ ನಮ್ಮೆಲ್ಲರನ್ನೂ ಒಟ್ಟುಗೂಡಿಸುತ್ತದೆ. ಅಧರ್ಮ ನಮ್ಮನ್ನು ಬೇರೆ ಬೇರೆಯಾಗಿ ಮಾಡುತ್ತದೆ. ಧರ್ಮದಲ್ಲಿ ಐಕ್ಯತೆಯನ್ನು ತರುವ ದೊಡ್ಡ ಶಕ್ತಿಯಿದೆ.

– ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು

## ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ದೀಪಾವಳಿ ಪ್ರಯುಕ್ತ ವಿಶೇಷ ಕಾರ್ಯಕ್ರಮಗಳು




### ಭ. ಶ್ರೀ ಮಹಾವೀರ ತೀರ್ಥಂಕರರ ಮೋಕ್ಷ ಕಲ್ಯಾಣ ಮಹೋತ್ಸವ



ಶ್ರೀಕ್ಷೇತ್ರದಲ್ಲಿ ಚಾತುರ್ಮಾಸ ನಿರತ ಸಮಸ್ತ ತ್ಯಾಗಿವೃಂದ ಹಾಗೂ ಶ್ರೀ ಸ್ವಾಮಿಗಳವರ ಸಾನಿಧ್ಯದಲ್ಲಿ ಭ ಶ್ರೀ ಮಹಾವೀರ ತೀರ್ಥಂಕರರ 2550ನೇ ಮೋಕ್ಷ ಕಲ್ಯಾಣ ಮಹೋತ್ಸವ ಪ್ರಯುಕ್ತ ಭಂಡಾರಿ ಬಸದಿಯಲ್ಲಿ ಮಹಾವೀರ ತೀರ್ಥಂಕರರಿಗೆ ಪಂಚಾಮೃತ ಅಭಿಷೇಕ ನೆರವೇರಿಸಿ ನಿರ್ವಾಣ ಲಡ್ಡು ಸಮರ್ಪಿಸಲಾಯಿತು.

### ಶ್ರೀಗಳವರಿಂದ ಮಣ್ಣಿನ ಹಣತೆ ವಿತರಣೆಗೆ ಚಾಲನೆ



ಶ್ರವಣಬೆಳಗೊಳ, ನ. 9 : ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ಶ್ರೀಮಠದ ವತಿಯಿಂದ ಶ್ರೀಮಠದ ಪ್ರತಿನಿಧಿಗಳು, ಮಠದ ಆಶ್ರಮದ ವಿದ್ಯಾರ್ಥಿಗಳ ಸಹಯೋಗದೊಂದಿಗೆ ಶ್ರವಣಬೆಳಗೊಳ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿದ ಏಳು ವಾರ್ಡ್‌ಗಳಿಗೆ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಒಟ್ಟು 13 ಸಾವಿರ ಮಣ್ಣಿನ ಹಣತೆಗಳನ್ನು ವಿತರಿಸಲಾಯಿತು. ಈ ಕಾರ್ಯಕ್ರಮವು ಆಯಾ ವಾರ್ಡ್‌ಗಳ ಸದಸ್ಯರುಗಳು ಹಾಗೂ ಗ್ರಾಮಪಂಚಾಯಿತಿಯ ಅಧ್ಯಕ್ಷರ ಸಹಕಾರದೊಂದಿಗೆ ನೆರವೇರಿತು.

## ಅಭಿನವ ಚಾರುಶ್ರೀ ನುಡಿ



### ಪುಣ್ಯ ಪಾಪಕ್ಕೆ ಕಾರಣ ಲೇಶ್ಯೆಗಳು

ಲೇಶ್ಯೆಗಳು ಜೀವಿಗಳಲ್ಲಿನ ಪುಣ್ಯ ಮತ್ತು ಪಾಪಗಳ ಬಂಧಕ್ಕೆ ಕಾರಣವಾಗುತ್ತದೆ. ಕಷಾಯಗಳಿಂದ ಅನುರಂಜಿತವಾದ ಯೋಗ ಪ್ರವೃತ್ತಿಯನ್ನೇ ಲೇಶ್ಯ ಎನ್ನಲಾಗಿದೆ. ಆತ್ಮವು ಯಾವುದರ ಮುಖಾಂತರ ಪುಣ್ಯ ಪಾಪಗಳಿಗೆ ಅಧೀನವಾಗುತ್ತದೋ ಅದಕ್ಕೆ ಲೇಶ್ಯೆಗಳೇ ಕಾರಣ.

ಆಚಾರ್ಯ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಗೊಮ್ಮಟಸಾರದ ಜೀವಕಾಂಡದಲ್ಲಿ ಲೇಶ್ಯೆಗಳಿಗೆ ಸುಂದರ ನಿದರ್ಶನ ನೀಡಿದ್ದಾರೆ. ಆರು ಜನ ದಾರಿ ಹೋಕರು ಒಂದು ಫಲಭರಿತ ಮರವನ್ನು ನೋಡಿ ಹೀಗೆ ಯೋಚಿಸುತ್ತಾರೆ. ಕೃಷ್ಣ ಲೇಶ್ಯೆಯುಳ್ಳವನು 'ನಾನು ಈ ವೃಕ್ಷವನ್ನು ಬುಡದಿಂದಲೇ ಕಡಿದು ಹಣ್ಣನ್ನು ತಿನ್ನುವೆ'. ನೀಲ ಲೇಶ್ಯೆಯುಳ್ಳವನು 'ನಾನು ಮರದ ಮಧ್ಯಭಾಗವನ್ನು ಕಡಿದು ಹಣ್ಣುಗಳನ್ನು ತಿನ್ನುವೆ'. ಕಾಪೋತ ಲೇಶ್ಯೆಯುಳ್ಳವನು 'ನಾನು ಮರದ ದೊಡ್ಡ ದೊಡ್ಡ ಕೊಂಬೆಗಳನ್ನು ಕಡಿದು ಹಣ್ಣು ತಿನ್ನುವೆ'. ದೀತ ಲೇಶ್ಯೆಯುಳ್ಳವನು 'ನಾನು ಮರದ ಸಣ್ಣ–ಸಣ್ಣ ಕೊಂಬೆಗಳನ್ನು ಕಡಿದು ಹಣ್ಣುಗಳನ್ನು ತಿನ್ನುವೆ'. ಪದ್ಮ ಲೇಶ್ಯೆಯುಳ್ಳವನು 'ನಾನು ಮರದ ಪಕ್ವವಾದ ಹಣ್ಣುಗಳನ್ನು ಮಾತ್ರ ಕಿತ್ತು ತಿನ್ನುವೆ'. ಶುಕ್ಲ ಲೇಶ್ಯೆಯುಳ್ಳವನು 'ನಾನು ಈ ವೃಕ್ಷದಿಂದ ಹಣ್ಣಾಗಿ ಕೆಳಗೆ ಬಿದ್ದ ಹಣ್ಣುಗಳನ್ನು ಮಾತ್ರ ತಿನ್ನುವೆ'.

ಈ ಆರು ದಾರಿ ಹೋಕರಲ್ಲೂ ಬೇರೆ–ಬೇರೆ ಭಾವನೆಗಳು ಉಂಟಾಗುತ್ತವೆ. ಇವು ಕಷಾಯಗಳಿಂದ ಅನುರಂಜಿತವಾದ ಯೋಗ ಪ್ರವೃತ್ತಿಯಿಂದ ಉಂಟಾಗುತ್ತವೆ. ಮೊದಲ ಮೂರು ಲೇಶ್ಯೆಗಳು ಅಶುಭ ಲೇಶ್ಯೆಗಳಾಗಿದ್ದು, ಆತ್ಮನಲ್ಲಿ ಅಶುಭ ಪರಿಣಾಮ ಉಂಟು ಮಾಡಿ ಪಾಪ ಬಂಧಕ್ಕೆ ಒಳಗಾಗಿ ನರಕ ಗತಿಗೆ ಕಾರಣವಾಗುತ್ತದೆ. ನಂತರದ ಮೂರು ಲೇಶ್ಯೆಗಳು ಶುಭ ಲೇಶ್ಯೆಗಳಾಗಿದ್ದು, ಆತ್ಮನಲ್ಲಿ ಶುಭ ಪರಿಣಾಮ ಉಂಟುಮಾಡಿ ಪುಣ್ಯ ಬಂಧಕ್ಕೆ ಒಳಗಾಗಿ ದೇವಗತಿಗೆ ಕಾರಣವಾಗುತ್ತದೆ.

ಹೀಗೆ ಲೇಶ್ಯೆಗಳು ಪಾಪ ಮತ್ತು ಪುಣ್ಯ ಬಂಧಕ್ಕೆ ಕಾರಣವಾಗುತ್ತಾ ಗತಿ ನಿರ್ಣಯ ಮಾಡುತ್ತದೆ. ಆದ್ದರಿಂದ ಪ್ರತಿಯೊಂದು ಜೀವಾತ್ಮವು ಶುಭ ಲೇಶ್ಯೆಗಳನ್ನು ಚಿಂತಿಸಿ ಮೋಕ್ಷ ಹಾದಿಯಲ್ಲಿ ಸಾಗಿದಾಗ ಮಾತ್ರ ಗತಿಭ್ರಮಣೆಯಿಂದ ಬಿಡುಗಡೆ ಹೊಂದಬಹುದು.

– ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು

## ಶ್ರವಣಬೆಳಗೊಳದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ



ಶ್ರವಣಬೆಳಗೊಳ, ನ.1 : ಶ್ರೇಷ್ಠವಾದ ಸಂಸ್ಕೃತಿ ಹೊಂದಿರುವ ಕನ್ನಡ ನಾಡನ್ನು ಉಳಿಸಿ ಬೆಳಸುವ ಹೊಣೆಗಾರಿಕೆ ನಮ್ಮ ಮೇಲಿದೆ. ಕನ್ನಡತನವನ್ನು ಕಟ್ಟುವ ಮನಸ್ಸು ನಮ್ಮದಾಗಬೇಕು. ಕನ್ನಡ ನಮ್ಮೆಲ್ಲರ ಉಸಿರಾಗಬೇಕು. ಆಗಮಾತ್ರ ನಾವು ಕನ್ನಡ ನಾಡಿನಲ್ಲಿ ಜನ್ಮವೆತ್ತಿದ್ದಕ್ಕೆ ಸಾರ್ಥಕವಾಗುತ್ತದೆ ಎಂದು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ಹೇಳಿದರು. ಶ್ರವಣಬೆಳಗೊಳ ಜೈನ ಮಠದ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು ಕನ್ನಡ ಅತ್ಯಂತ ಪ್ರಾಚೀನ ಹಾಗೂ ವೈಜ್ಞಾನಿಕ ಭಾಷೆ. ಕನ್ನಡ ಭಾಷಾ ಸಾಹಿತ್ಯಕ್ಕೆ ಜೈನ ಧರ್ಮದ ಕೊಡುಗೆ ಮಹತ್ವದ್ದಾಗಿದೆ. ಪಂಪ, ರನ್ನ, ಜನ್ನರಿಂದ ಹಿಡಿದು ಇಂದಿನವರೆಗೂ ಸಂಸ್ಕೃತಿಯ ಉಳಿವಿಗಾಗಿ ಹಲವಾರು ಮಂದಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಮಹನೀಯರ, ಸಾಧಕರ, ಸಾಧನೆಯ ಫಲವಾಗಿ ಕನ್ನಡ ಭಾಷೆ ಶ್ರೀಮಂತವಾಗಿದೆ. ನಮ್ಮ ದೀಕ್ಷಾ ಗುರುಗಳಾದ ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ಸುಮಾರು 12 ವರ್ಷಗಳು ತಪಸ್ಸಿನಂತೆ ವಾಹನ ತ್ಯಾಗ ಮಾಡಿ ಪ್ರಾಕೃತ ಭಾಷೆಯಲ್ಲಿದ್ದ ಧವಲ, ಜಯಧವಲ, ಮಹಾಧವಲ ಗ್ರಂಥಗಳನ್ನು ಕನ್ನಡ ಭಾಷೆಗೆ ಅನುವಾದಿಸಿ 40 ಸಂಪುಟಗಳನ್ನು ಪ್ರಕಟಿಸಿ, ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಶ್ರೀಮಠವು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗಾಗಿ ಕಟಿಬದ್ಧರಾಗಿದ್ದೇವೆ. ಕನ್ನಡ ನಾಡಿಗೆ ಕರ್ನಾಟಕ ಎಂದು ಹೆಸರಾಗಿ ಐದು ದಶಕಗಳು ತುಂಬಿದ ಈ ಸಂದರ್ಭ ನಮ್ಮೆಲ್ಲರಿಗೂ ಪರ್ವ ಸಂಭ್ರಮ ಎನಿಸಿದೆ. ಎಂದೆಂದಿಗೂ ಕನ್ನಡವು ಚಿರಕಾಲವಿರಬೇಕು ಎಂದರು.

## ಡಾ. ಡಿ. ವೀರೇಂದ್ರ ಹೆಗ್ಗಡೆಯವರಿಗೆ ಚಾಂಪಿಯನ್ಸ್ ಆಫ್ ಚೇಂಜ್ ಕರ್ನಾಟಕ ಪ್ರಶಸ್ತಿ



ಬೆಂಗಳೂರು, ನ. 8 : ಧರ್ಮಸ್ಥಳದ ಧರ್ಮಾಧಿಕಾರಿ ಪದ್ಮಭೂಷಣ, ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಐಎಫ್‌ಐಈ ಸಂಸ್ಥೆಯು ಕೊಡಮಾಡುವ ಚಾಂಪಿಯನ್ಸ್ ಆಫ್ ಚೇಂಜ್ ಕರ್ನಾಟಕ ಪ್ರಶಸ್ತಿಗೆ ಆಯ್ಕೆಯಾಗಿದ್ದು, ಕರ್ನಾಟಕ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್‌ರವರು ಪ್ರಶಸ್ತಿ ಪ್ರದಾನ ಮಾಡಿದರು.

## ಪ.ಪೂ. ಪಂಡಿತಾಚಾರ್ಯವರ್ಯ ಸ್ವಾಮಿಗಳವರಿಂದ ಪೂಜ್ಯ ಜ್ಞಾನಮತಿ ಮಾತಾಜಿಯವರಿಗೆ ಭಕ್ತಿ ಗೌರವ ಸಮರ್ಪಣೆ




ಅಯೋಧ್ಯೆ : ಪೂಜ್ಯ ಗಣಿನೀ ಆರ್ಯಿಕಾ ಶ್ರೀ 105 ಜ್ಞಾನಮತಿ ಮಾತಾಜಿಯವರ 90ನೇ ಜನ್ಮದಿವಸ ಹಾಗೂ 72ನೇ ದೀಕ್ಷಾ ದಿನದ ಸಂದರ್ಭದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಜಿನಕಂಚಿ, ಕಾರ್ಕಳ, ಮೂಡಬಿದ್ರಿ, ಅರಿಹಂತಗಿರಿ, ಕನಕಗಿರಿ, ಸಿಂಹನಗದ್ದೆ, ನಾಂದಣಿ, ವರೂರು ಆರತಿಪುರ ಮುಂತಾದ ಸಮಸ್ತ ಪರಮಪೂಜ್ಯ ಪಂಡಿತಾಚಾರ್ಯವರ್ಯ ಸ್ವಾಮಿಗಳವರು ಪಾಲ್ಗೊಂಡು ಭಕ್ತಿಸಮರ್ಪಿಸಿದರು.

## ಬಸದಿಯ ಜೀರ್ಣೋದ್ಧಾರಕ್ಕೆ ಭೂಮಿ ಪೂಜೆ



ಟಿ. ನರಸೀಪುರ : ಮೂಗೂರಿನ ಭ. ಶ್ರೀ ಪಾರ್ಶ್ವನಾಥ ಬಸದಿಯ ಜೀರ್ಣೋದ್ಧಾರ ಕಾರ್ಯಕ್ಕೆ ಕನಕಗಿರಿಯ ಪ.ಪೂ. ಸ್ವಸ್ತಿಶ್ರೀ ಭುವನಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರು ಇತ್ತೀಚೆಗೆ ಭೂಮಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್‌ನ ಜಯಕೀರ್ತಿರವರು ಬಸದಿಯ ಮೂಲ ಸ್ವರೂಪಕ್ಕೆ ದಕ್ಕೆಯಾಗದಂತೆ 18 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.

## ಪ.ಪೂ. ಪುಣ್ಯಸಾಗರ ಮಹಾರಾಜರ ಪಿಂಚಿ ಪರಿವರ್ತನಾ ಕಾರ್ಯಕ್ರಮ




ಬೆಳಗಾವಿ : ಚಿನ್ನಾಪಟ್ಟಣ ಪೀರನವಾಡಿ ಭ. ಶ್ರೀ ನೇಮಿನಾಥ ದಿಗಂಬರ ಜೈನ ಬಸದಿಯಲ್ಲಿ ಚಾತುರ್ಮಾಸ ಆಚರಿಸುತ್ತಿರುವ ಸುಜ್ಞಾನ ತಪಸ್ವಿ ಪ.ಪೂ. ಮುನಿಶ್ರೀ 108 ಪುಣ್ಯಸಾಗರ ಮಹಾರಾಜರು ಹಾಗೂ ಪ.ಪೂ. ಮುನಿಶ್ರೀ 108 ಪುರಾಣಸಾಗರ ಮಹಾರಾಜರ ಪಿಂಚಿ ಪರಿವರ್ತನಾ ಕಾರ್ಯಕ್ರಮವು ನವೆಂಬರ್ 18ರಂದು ನೆರವೇರಲಿದೆ.

## ಪಿಂಚಿ ಪರಿವರ್ತನಾ ಕಾರ್ಯಕ್ರಮ



ಮಂಡ್ಯ, ನ. 10 : ಭ ಶ್ರೀ ಅನಂತನಾಥ ದಿಗಂಬರ ಜೈನ ಬಸದಿಯಲ್ಲಿ ಚಾತುರ್ಮಾಸ ಆಚರಿಸಿದ ಆರ್ಯಿಕಾ ಶ್ರೀ 105 ಸಮ್ಯಕ್‌ಶ್ರೀ ಮಾತಾಜಿ ಹಾಗೂ ಕ್ಷುಲ್ಲಿಕಾ ಶ್ರೀ ವಿನಯಶ್ರೀ ಮಾತಾಜಿಯವರ ಪಿಂಚಿ ಪರಿವರ್ತನಾ ಕಾರ್ಯಕ್ರಮವು ಜರುಗಿತು. ಈ ಸಂದರ್ಭದಲ್ಲಿ ಮಾತಾಜಿಯವರಿಗೆ ಅರ್ಘ್ಯದೊಂದಿಗೆ ವಸ್ತ್ರದಾನ, ಶಾಸ್ತ್ರದಾನ ಮಾಡಲಾಯಿತು. ನಂತರ ಮಾತಾಜಿಯವರು ಆಶೀರ್ವಚನ ನೀಡಿದರು.

## ಬಸ್ತಿಹೊಸಕೋಟೆಯಲ್ಲಿ ಬಾಹುಬಲಿ ಸ್ವಾಮಿ ಪುನರ್ ಪ್ರತಿಷ್ಠಾಪನೆ



ಮಂಡ್ಯ : ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಬೂಕನಕೆರೆ ಹೋಬಳಿಯ ಬಸದಿ ಹೊಸಕೋಟೆಯಲ್ಲಿ ನವೆಂಬರ್ 23ರಿಂದ 25 ರವರೆಗೆ 18 ಅಡಿ ಎತ್ತರದ ಭ. ಶ್ರೀ ಬಾಹುಬಲಿ ಸ್ವಾಮಿಯ ಪುನರ್ ಪ್ರತಿಷ್ಠಾಪನಾ ಮಹೋತ್ಸವ ಮತ್ತು ಶ್ರೀ ಸಿದ್ಧಚಕ್ರ ಆರಾಧನೆಯು ಪ.ಪೂ. ಮುನಿಶ್ರೀ 108 ಅಮೋಘ ಕೀರ್ತಿ ಮಹಾರಾಜರು ಹಾಗೂ ಪ.ಪೂ. ಮುನಿಶ್ರೀ 108 ಅಮರಕೀರ್ತಿ ಮಹಾರಾಜರ ಮಾರ್ಗದರ್ಶನ ಮತ್ತು ಪಾವನ ಸಾನ್ನಿಧ್ಯದಲ್ಲಿ ಹಾಗೂ ಶ್ರವಣಬೆಳಗೊಳದ ಪ.ಪೂ. ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರು ಮತ್ತು ಸಮಸ್ತ ಪಂಡಿತಾಚಾರ್ಯವರ್ಯ ಸ್ವಾಮಿಗಳವರ ಪಾವನ ಸಾನ್ನಿಧ್ಯ ಹಾಗೂ ಧರ್ಮಸ್ಥಳದ ಪದ್ಮಭೂಷಣ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಸಹಕಾರದಲ್ಲಿ ನೆರವೇರಲಿದೆ.

## ಹೊಂಬುಜದಲ್ಲಿ ವಿಜಯದಶಮಿ ಉತ್ಸವ

ಹೊಂಬುಜ, ಅ.23 : ಆಧುನಿಕ ತಂತ್ರಜ್ಞಾನದ ಬಳಕೆಯಿಂದ ವಿದ್ಯಾವಂತರಾಗಿ, ಸದಾ ಅಧ್ಯಯನ ಶೀಲರಾಗಿ ಜ್ಞಾನಸಂಪತ್ತು ವರ್ಧಿಸುವಂತಾಗಲೆಂದು ಹೊಂಬುಜದ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ವಿಜಯದಶಮಿ ಸಂದರ್ಭದಲ್ಲಿ ಹೇಳಿದರು. ಉತ್ತಮ ಬಾಳ್ವೆಯ ಕನಸು ನನಸಾಗಿ ಆಧ್ಯಾತ್ಮಿಕ ಚಿಂತನೆಯ ಶ್ರೀಫಲ ಎಲ್ಲೆಡೆ ದುಃಖ ಸಂಕಷ್ಟಗಳನ್ನು ಪರಿಹರಿಸಲಿ. ಜಗತ್ತಿನಲ್ಲಿ ಸುಖ–ಶಾಂತಿ–ಸಮೃದ್ಧಿ ವಾತಾವರಣ ಉಂಟಾಗಲಿ ಎಂದು ಹರಸಿದರು.



ಐತಿಹಾಸಿಕ ಅತಿಶಯ ಶ್ರೀಕ್ಷೇತ್ರ ಹೊಂಬುಜದ ಶ್ರೀ ನೇಮಿನಾಥ ಸ್ವಾಮಿ, ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಶ್ರೀ ಪದ್ಮಾವತಿ ದೇವಿ, ಶ್ರೀ ಕೂಷ್ಮಾಂಡಿನಿ ದೇವಿ, ಶ್ರೀ ಸರಸ್ವತಿ ದೇವಿ, ಶ್ರೀ ಕ್ಷೇತ್ರಪಾಲ ಸಹಿತ ಚತುರ್ವಿಂಶತಿ ತೀರ್ಥಂಕರರಿಗೆ ಆಗಮೋಕ್ತ ಪದ್ಧತಿಯಂತೆ ಪೂಜೆ, ಪ್ರಾರ್ಥನೆ ಸಲ್ಲಿಸಲಾಯಿತು.

**ಬನ್ನಿ ಮಂಟಪದಲ್ಲಿ ಶಮಿವೃಕ್ಷ ಪೂಜೆ:**

ಪರಂಪರಾನುಗತವಾಗಿ ಆಚರಿಸುವ ಶಮೀ ವೃಕ್ಷ ಪೂಜೆಯನ್ನು ಶ್ರೀ ಕ್ಷೇತ್ರದ ಉತ್ಸವ ಮೂರ್ತಿಯ ಸಾನಿಧ್ಯದಲ್ಲಿ ಪೂಜ್ಯಶ್ರೀಗಳ ಉಪಸ್ಥಿತಿಯಲ್ಲಿ ನೆರವೇರಿ–ಸಲಾಯಿತು. ಶ್ರೀ ಕ್ಷೇತ್ರದಿಂದ ಬನ್ನಿ ಮಂಟಪದವರೆಗೆ ಸಾಲಂಕೃತ ಮೆರವಣಿಗೆಯಲ್ಲಿ ಆನೆ ಐಶ್ವರ್ಯ, ಕುದುರೆ ಮಾನವಿ ಸಹಿತ ವಾದ್ಯಗೋಷ್ಠಿಯೊಂದಿಗೆ ಊರ–ಪರವೂರ ಭಕ್ತರು ಪಾಲ್ಗೊಂಡು ವಿಜಯದಶಮಿ ಪ್ರಯುಕ್ತ ಶಮೀ ಪತ್ರಗಳನ್ನು ಶ್ರೀಗಳಿಂದ ಸ್ವೀಕರಿಸಿದರು.

## ಸಂಶೋಧನಾ ಲೇಖನ ಮಂಡನೆ



ಆಸ್ಟ್ರೇಲಿಯಾ : ಆಸ್ಟ್ರೇಲಿಯಾದ ಬ್ರಿಸ್ಬೇನ್‌ನಲ್ಲಿ ಸೆಪ್ಟೆಂಬರ್ 24 ರಿಂದ 28ರವರೆಗೆ ಜರುಗಿದ 81ನೇ ಎಫ್‌ಐಪಿ ವರ್ಲ್ಡ್ ಕಾಂಗ್ರೆಸ್ ಆಫ್ ಫಾರ್ಮಸಿ ಮತ್ತು ಫಾರ್ಮಾಸ್ಯುಟಿಕಲ್ ಸೈನ್ಸ್ ಸಮ್ಮೇಳನದಲ್ಲಿ ಮೈಸೂರಿನ ಶಾರದಾ ವಿಲಾಸ್ ಫಾರ್ಮಸಿ ಕಾಲೇಜಿನ ಸಹಪ್ರಾಧ್ಯಾಪಕ ಮತ್ತು ಔಷಧೀಯ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ **ಡಾ. ಜಿನೇಶ್ ಬಿ. ನಾಗಾವಿ** ಯವರು 'ಭಾರತದಲ್ಲಿ ಹೊರರೋಗಿಗಳ ವ್ಯವಸ್ಥೆಯಲ್ಲಿ ಔಷಧಿಕಾರರ ಪಾತ್ರ'ದ ಕುರಿತು ಸಂಶೋಧನಾ ಲೇಖನ ಮಂಡಿಸಿ ನೂರಾರು ವಿಜ್ಞಾನಿಗಳ ಪ್ರಶಂಸೆಗೆ ಪಾತ್ರರಾದರು.

## ರಶ್ಮಿರವರಿಗೆ ಪಿಎಚ್‌ಡಿ



ಬೆಳಗಾವಿ : **ರಶ್ಮಿ ಅಪ್ಪಣ್ಣವರ** ಅವರು ಇಂಪ್ಯಾಕ್ಟ್ ಆಫ್ ಲೈಫ್ ಸ್ಕಿಲ್ಸ್ ಟ್ರೈನಿಂಗ್ ಆನ್ ಸೈಕೋ ಸೋಷಿಯಲ್ ಕಾಂಪಿಟನ್ಸ್, ಸೆಲ್ಫ್ ಎಸ್ಟೀಮ್ ಅಂಡ್ ಬಿಯೇ–ವಿಯರಲ್ ಪ್ರಾಬ್ಲಮ್ಸ್ ಆಫ್ ಆರ್ಫನ್ ಚಿಲ್ಡ್ರನ್ ವಿಷಯದಲ್ಲಿ ಮಂಡಿಸಿದ ಮಹಾಪ್ರಬಂಧಕ್ಕೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.


## ದುಬೈ ಪ್ರವಾಸ

ಪ್ರವಾಸ ದಿ: 12–02–2024 ರಿಂದ 18–02–2024, (4 ರಾತ್ರಿ, 5 ದಿನ) ಸೀಟೊಂದಕ್ಕೆ ರೂ. 92000/– ಬುಕಿಂಗ್ ಕೊನೆ ದಿ. 16–11–2023 ಬೆಳಗಾವಿ–ಹುಬ್ಬಳ್ಳಿ–ಬೆಂಗಳೂರಿನಿಂದ ಮೀರ್‍ಯಾಕಲ್ ಗಾರ್ಡನ, ಡೆಸರ್ಟ ಸಫಾರಿ, ಡಾಲ್ಫಿನ ಶೋ, ಗ್ಲೋಬಲ್ ವ್ಹಿಲೇಜ, ದುಬೈ ಅಕ್ವೆರಿಯಮ್, ಅಡರವಾಟರ್ ಝೂ, ಬುರ್ಜ ಖಲಿಫಾ, ಜುಮೇರಾ ಬೀಚ್, ದುಬೈ ಫ್ರೇಮ್. ಸಂಪರ್ಕಿಸಿ:

**ಬದ್ರಿನಾಥ ಯಾತ್ರಾ ಸಂಘ**

ಬೆಳಗಾವಿ: 9448347054

ಬೆಂಗಳೂರು: 7259423165



## ವಿದೇಶ ಪ್ರಯಾಣ



ನಮ್ಮ ಪುತ್ರಿ

**ಕು. ಪನ್ನಗಾ ಅಶೋಕ ಬೋಗಾರ**

ಸಾ॥ ಹಾವೇರಿ ತಾ॥ ಜಿ॥ ಹಾವೇರಿ ಇವರು ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಹಾಗೂ ತೋಟಗಾರಿಕಾ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ಹೆಚ್ಚಿನ ತರಬೇತಿಗಾಗಿ ಕೃಷಿ ವಿಶ್ವವಿದ್ಯಾಲಯದ ವತಿಯಿಂದ ಬೆಂಗಳೂರಿನ ಮೂಲಕ ವಿಯೆಟ್ನಾಂ ದೇಶಕ್ಕೆ ದಿನಾಂಕ:20-11-2023 ರಂದು ವಿದೇಶ ಪ್ರಯಾಣ ಬೆಳೆಸುತ್ತಿದ್ದಾರೆ. ಇವರ ಪ್ರಯಾಣ ಸುಖಕರವಾಗಿರಲಿ ಹಾಗೂ ಇವರ ತರಬೇತಿ ಯಶಸ್ವಿಯಾಗಲೆಂದು ಶುಭ ಹಾರೈಸುತ್ತೇವೆ.

**ಶುಭ ಕೋರುವವರು**

ತಾಯಿ ಶ್ರೀಮತಿ ಜಯಂತಿ ಅಶೋಕ ಬೋಗಾರ ತಂದೆ ಶ್ರೀ ಅಶೋಕ ಬೋಗಾರ

ಸಹೋದರ ಕು. ಸಮೃದ್ಧ ಅ. ಬೋಗಾರ

ಅಜ್ಜಿಯಂದಿರು, ಚಿಕ್ಕಮ್ಮ–ಚಿಕ್ಕಪ್ಪಂದಿರು, ದೊಡ್ಡಮ್ಮ–ದೊಡ್ಡಪ್ಪಂದಿರು

ಅತ್ತೆಯಂದಿರು, ಮಾವ ಧರಣೇಂದ್ರ ಆರ್.ಜೆ., ಅಕ್ಕ & ಮಾಮಾ

ಪುಟಾಣಿಗಳು ಘನಿಷ್ಕಾ ಮತ್ತು ಸಾನ್ವಿಕಾ ಅಪಾರ ಬಂಧು–ಬಳಗ ಹಾಗೂ ಆಪ್ತಮಿತ್ರರು


## ಸಿಂಹನಗದ್ದೆಯಲ್ಲಿ ಶರನ್ನವರಾತ್ರಿ ಮಹೋತ್ಸವ







ನರಸಿಂಹರಾಜಪುರ, ಅ. 24 : ಪ.ಪೂ. ಸ್ವಸ್ತಿಶ್ರೀ ಲಕ್ಷ್ಮೀಸೇನ ಪಂಡಿತಾಚಾರ್ಯವರ್ಯ ಸ್ವಾಮಿಗಳವರ ಪಾವನ ಸಾನ್ನಿಧ್ಯದಲ್ಲಿ ಸಿಂಹನಗದ್ದೆ ಬಸ್ತಿಮಠದಲ್ಲಿ ಶರನ್ನವರಾತ್ರಿ ಹಾಗೂ ವಿಜಯದಶಮಿ ಮಹೋತ್ಸವವು ವಿಜೃಂಭಣೆಯಿಂದ ಜರುಗಿತು. 9 ದಿನಗಳು ಶ್ರೀ ಜ್ವಾಲಾಮಾಲಿನಿ ದೇವಿಯವರ ವಿಶೇಷ ಪೂಜೆ ಹಾಗೂ ಅಲಂಕಾರ ಮಾಡಲಾಗಿತ್ತು. ಶ್ರಾವಕಿಯರಿಂದ ಅಮ್ಮನವರಿಗೆ 108 ಬಾಗಿನ ಅರ್ಪಿಸಲಾಯಿತು. ವಿಜಯದಶಮಿಯಂದು ಪ.ಪೂ. ಶ್ರೀಗಳವರ ಪರಂಪರಾಗತ ಪೀಠಾರೋಹಣ, ಧರ್ಮೋಪದೇಶ ಕಾರ್ಯಕ್ರಮದೊಂದಿಗೆ ಬೆಳ್ಳಿರಥದಲ್ಲಿ ಶ್ರೀ ಜ್ವಾಲಾಮಾಲಿನಿ ಅಮ್ಮನವರ ಮೆರವಣಿಗೆ ಮಾಡಲಾಯಿತು.

## ವಿಶೇಷ ದಿನಗಳು

17.11.2023 ಶುಕ್ರವಾರ : ವೃಶ್ಚಿಕ ಸಂಕ್ರಮಣ, ಹೊಂಬುಜ ಶ್ರೀಗಳವರ ಪಟ್ಟಾಭಿಷೇಕ ದಿನ

20.11.2023 ಸೋಮವಾರ : ಅಷ್ಟಮಿ

24.11.2023 ಶುಕ್ರವಾರ : ಭ. ಶ್ರೀ ಅರನಾಥ ತೀರ್ಥಂಕರರ ಕೇವಲಜ್ಞಾನ ಕಲ್ಯಾಣ, ಅಮೃತ ಸಿದ್ಧಿಯೋಗ

27.11.2023 ಸೋಮವಾರ : ಹುಣ್ಣಿಮೆ, ಭ. ಶ್ರೀ ಶಂಭವನಾಥ ತೀರ್ಥಂಕರರ ಕೇವಲಜ್ಞಾನ ಕಲ್ಯಾಣ

28.11.2023 ಮಂಗಳವಾರ : ಭ. ಶ್ರೀ ಅನಂತನಾಥ ತೀರ್ಥಂಕರರ ಗರ್ಭ ಕಲ್ಯಾಣ

## ಜೈನ್ ಕ್ವಿಜ್

: ಪ್ರಶ್ನೆಗಳು :

1) ಭಗವಾನ್ ಶ್ರೀ ಆದಿನಾಥರ ಸಮಯದಲ್ಲಿ ಬಾಹುಬಲಿ ಕಾಮದೇವನಾಗಿದ್ದಂತೆ ಶ್ರೀಮಹಾವೀರರ ಸಮಯದಲ್ಲಿ ಆಗಿದ್ದ ಕಾಮದೇವ ಯಾರು?
2) ಆಚಾರ್ಯ ಭದ್ರಬಾಹುಸ್ವಾಮಿ ತಮ್ಮ ಅಂತಿಮ ಸಮಯದಲ್ಲಿ ಸಂಘದ ಜವಾಬ್ಧಾರಿಯನ್ನು ಯಾರಿಗೆ ನೀಡಿದರು.
3) ಶ್ರವಣಬೆಳಗೊಳದಲ್ಲಿ ಶ್ರೀಮಠದ ಬಸದಿಯಲ್ಲಿರುವ ಬಿತ್ತಿಚಿತ್ರಗಳಲ್ಲಿ ಯಾರ ಜೀವನ ಚರಿತ್ರೆ ಇದೆ?
4) ಶ್ರೀ ಆದಿನಾಥರ ಸಮವಸರಣದಲ್ಲಿ ಪ್ರಮುಖ ಗಣಧರರು ಯಾರು?
5) ಭ. ಆದಿನಾಥ ಮತ್ತು ಯಕ್ಷಿ ಚಕ್ರೇಶ್ವರೀ ಅಮ್ಮನವರು ನೆಲೆಸಿರುವ ಹಾಸನ ಜಿಲ್ಲೆಯ ಪಂಚ ಕೂಟ ಬಸದಿ ಯಾವುದು?

ಈ ಮೇಲಿನ ಪ್ರಶ್ನೆಗಳಿಗೆ ದಿನಾಂಕ 25–11–2023ರ ಒಳಗೆ ದೂರವಾಣಿ ಸಂಖ್ಯೆ : 8660118443 ಗೆ ವಾಟ್ಸಪ್ ಮೂಲಕ ಸರಿ ಉತ್ತರಗಳನ್ನು ತಮ್ಮ ಹೆಸರು, ವಿಳಾಸದೊಂದಿಗೆ ಕಳುಹಿಸುವುದು.

ಸರಿ ಉತ್ತರ ಕಳುಹಿಸಿದ ಮೊದಲ 5 ಜನರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಹಿಂದಿನ ಸಂಚಿಕೆಯ ಉತ್ತರಗಳು :
1) ಅಕ್ಕನ ಬಸದಿ, 2) ಶ್ರೀಕ್ಷೇತ್ರ ಕನಕಗಿರಿ (ಮಲೆಯೂರು)
3) ಸಿದ್ಧಾಂತ ಬಸದಿ 4) ಜೀವದ್ರವ್ಯ
5) ಮಲ್ಲಿನಾಥ (ಇವರು ತೀರ್ಥಂಕರ ಪದವಿಯನ್ನು ಮಾತ್ರ ಹೊಂದಿರುತ್ತಾರೆ)

ಮೊದಲು ಸರಿ ಉತ್ತರ ಬರೆದವರು :
1) ಜಿ.ಎಸ್. ನಿರ್ಮಲಮ್ಮ, ಶ್ರವಣಬೆಳಗೊಳ
2) ಪ್ರಮೀಳ ಪ್ರಕಾಶ್, ಮೈಸೂರು
3) ಗೀತಾ ಆನಂದ್ ಎಂ.ಎನ್, ಮೈಸೂರು
4) ಅಲಕಾ ಬಾ. ಚಿಕ್ಕೋಡಿ, ಶ್ರವಣಬೆಳಗೊಳ
5) ಪದ್ಮಿನಿ ಜ್ವಾಲಕುಮಾರ್, ಬೆಂಗಳೂರು

ಇವರುಗಳಿಗೆ ಶುಭಾಷಯಗಳು

## ಬಾಹುಬಲಿ ಸ್ವಾಮಿ ನೃತ್ಯ ರೂಪಕ



ಶಮನೇವಾಡಿ, ಅ. 24 : ಗ್ರಾಮದ ಚಂದ್ರಪ್ರಭು ದಿಗಂಬರ ಜೈನಮಂದಿರದಲ್ಲಿ ನಡೆದ ಒಂಬತ್ತು ದಿನಗಳ ನವರಾತ್ರಿಯ ಸಂದರ್ಭದಲ್ಲಿ ಭ. ಶ್ರೀ ಬಾಹುಬಲಿ ಸ್ವಾಮಿಯ ತ್ಯಾಗದ ಕುರಿತು ಬಾಲಕಿಯರು ನೃತ್ಯ ರೂಪಕ ಪ್ರಸ್ತುತಪಡಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

## ಮಹಾವೀರ ಭವನ ಉದ್ಘಾಟನೆ



ತುಮಕೂರು, ಅ. 8 : ಶ್ರೀ ಎಲ್ಲಮ್ಮದೇವಿ ಬಸದಿ ಕುಂಕುಮನಹಳ್ಳಿ ನಾಗರಾಜಯ್ಯ ಟ್ರಸ್ಟ್ ವತಿಯಿಂದ ತುಮಕೂರಿನಲ್ಲಿ ನಿರ್ಮಾಣವಾಗಿರುವ 1008 ಭ. ಶ್ರೀ ಮಹಾವೀರ ಸಮುದಾಯ ಭವನದ ಉದ್ಘಾಟನಾ ಕಾರ್ಯಕ್ರಮವು ಜರುಗಿತು. ಈ ಸಂದರ್ಭದಲ್ಲಿ ಧರ್ಮಸ್ಥಳದ ಶ್ರೀ ಹರ್ಷೇಂದ್ರಕುಮಾರ್ ಮತ್ತು ಅವರ ಧರ್ಮಪತ್ನಿ ಹಾಗೂ ಕರ್ನಾಟಕ ಜೈನ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷರಾದ ಶ್ರೀ ಎಸ್. ಜಿತೇಂದ್ರ ಕುಮಾರ್‌ರವರು ಉಪಸ್ಥಿತರಿದ್ದರು.

## ಗೊಮ್ಮಟಗಿರಿಯಲ್ಲಿ ವಾರ್ಷಿಕ ಪೂಜೆ

ಗೊಮ್ಮಟಗಿರಿ : ಮೈಸೂರು ಬಳಿಯ ಗೊಮ್ಮಟಗಿರಿಯ ಭ. ಶ್ರೀ ಗೊಮ್ಮಟೇಶ್ವರ ಬಾಹುಬಲಿ ಸ್ವಾಮಿಗೆ 74ನೇಮಹಾಮಸ್ತಕಾಭಿಷೇಕ ಮಹೋತ್ಸವವು ನವೆಂಬರ್ 26ರಂದು ಜರುಗಲಿದೆ. ಶ್ರೀಕ್ಷೇತ್ರ ಹೊಂಬುಜ, ಕಂಬದಹಳ್ಳಿ ಹಾಗೂ ಆರತಿಪುರದ ಪ.ಪೂ. ಪಂಡಿತಾಚಾರ್ಯವರ್ಯ ಸ್ವಾಮಿಗಳವರು ಪಾವನ ಸಾನ್ನಿಧ್ಯ ವಹಿಸಲಿದ್ದಾರೆ. ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಶ್ರೀ ಮನೋಜ್ ಜೈನ್‌ರವರು ಕಟ್ಟಡಗಳನ್ನು ಉದ್ಘಾಟಿಸಲಿದ್ದಾರೆ.

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಶ್ರವಣಬೆಳಗೊಳ : ಪಾಲಿಟೆಕ್ನಿಕ್ ಮತ್ತು ಪಿಯುಸಿ ಮತ್ತು ನಂತರದ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೂಲತಃ ಶ್ರವಣಬೆಳಗೊಳದ ಅರ್ಹ ವಿದ್ಯಾರ್ಥಿಗಳಿಂದ ಶ್ರೀ ಜಿ.ಎಸ್. ಭರಮಯ್ಯ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ನವೆಂಬರ್ 25ರ ಒಳಗಾಗಿ ಕೈ ಬರಹದ ಅರ್ಜಿಗಳನ್ನು, ಶ್ರೀ ಎಸ್.ಎನ್. ಅಶೋಕ್‌ಕುಮಾರ್, ಕಾರ್ಯದರ್ಶಿ, ಚೇತನ ತೋಟದ ಮನೆ, ಶ್ರವಣಬೆಳಗೊಳ ಈ ವಿಳಾಸಕ್ಕೆ ಕಳುಹಿಸುವಂತೆ ಟ್ರಸ್ಟ್‌ನ ಧರ್ಮದರ್ಶಿ ಡಾ. ಜಿ.ಎಸ್. ಬ್ರಹ್ಮರಾಜ್‌ರವರು ತಿಳಿಸಿದ್ದಾರೆ.

## ಜಿನ ಪದಬಂಧ–05



ಮೇಲಿನಿಂದ ಕೆಳಕ್ಕೆ :
1) ಮುನಿಗಳಿಗೆ ಆಹಾರ ದಾನ ಮಾಡುವಾಗ ಇದು ಆಗಬಾರದು (4)
3) ರತ್ನತ್ರಯಗಳಲ್ಲಿ ಒಂದು. (3)
4) ಚತುರ್ಗತಿಗಳಲ್ಲಿ ಒಂದು (3)
6) ವಸ್ತ್ರ, ಭೋಜನ, ಆಭರಣ ಮೊದಲಾದ ವಸ್ತುಗಳನ್ನು ಮರಣಾಂತ್ಯ, ಅಥವಾ ಕೆಲವು ಕಾಲ ಬಿಡುವ ವ್ರತವನ್ನು ಇದಕ್ಕೆ ಸೇರಿಸಿ (5)
8) ವೃಷಭನಾಥ ತೀರ್ಥಂಕರರ 3ನೇಯ ಭವ. (4)
9) ತೆಂಗಿನ ಮರವೇ ? (4)
11) 14ನೇಯ ತೀರ್ಥಂಕರರ ಮಾತೆಯ ಹೆಸರು ತಿರುಗಿದೆ (4)
13) ಎಲ್ಲಾ ತೀರ್ಥಂಕರರ ಪೂರ್ವ ಜನ್ಮಗಳ ಕಥನ.(4)
16) ಮುನಿಗಳಿಗೆ ತೋರಿಸುವ 9 ವಿಧವಾದ ಭಕ್ತಿ. (3)
17) ಭಗವಾನ್ ಬಾಹುಬಲಿಯ ತಾಯಿ. (3)
18) ಈ ಬಂಧನ ಬೇಡ. (2)
19) ದಶಧರ್ಮಗಳಿಗೆ ಪ್ರಥಮ ಸೋಪಾನ (2)
20) ತಲಕಾಡು ಇವರ ರಾಜಧಾನಿಯಾಗಿತ್ತು (2)

ಎಡದಿಂದ ಬಲಕ್ಕೆ
1) ಶ್ರೀ ಆದಿನಾಥರು ತಮ್ಮ ಪುತ್ರಿ ಸುಂದರಿಗೆ ಈ ಶಾಸ್ತ್ರ ಹೇಳಿಕೊಟ್ಟರು (2)
2) ಶ್ರೀ ಅರ ತೀರ್ಥಂಕರರ ತಂದೆ. (4)
5) ಸೂರ್ಯಾಸ್ತದ ನಂತರ ಜೈನರಿಗೆ ಇದು ನಿಷಿದ್ಧ (5)
7) ತೀರ್ಥಂಕರರ ಲಾಂಛನ. (3)
9) ಕ್ರೋಧ, ಮಾನ, ಮಾಯ, ಲೋಭಗಳು. (3)
10) ಭ.ಪಾರ್ಶ್ವನಾಥರ ಯಕ್ಷಿ. (4)
12) ಆದಿ ತೀರ್ಥಂಕರ (3)
14) ವಚನ ಮತ್ತು ಕಾಯ ಯೋಗದೊಡನೆ ಸೇರಿಸಿ (4)
15) ಪಂಚಕಲ್ಯಾಣಗಳಲ್ಲಿ ಒಂದು (5)
17) ಬೆಳ್ಗೊಳದ ಬಾಹುಬಲಿಯ ಕೇಶ ಹೀಗಿದೆ. (3)
18) ಕ್ರೋಧಾದಿಗಳು ನೀರಿನ ಮೇಲೆ ಬರೆಯುವಷ್ಟು ಕಾಲವಿರಬೇಕು ಅದು ತಿರುಗಿದೆ (3)
20) ಅಷ್ಟವಿಧಾರ್ಚನೆಯ 2ನೆಯ ದ್ರವ್ಯ ಇಲ್ಲಿ ದೀರ್ಘವಾಗಿದೆ. (2)
21) ಉತ್ತಮ ಕ್ಷಮಾದಿ ಗುಣಗಳು (4)
22) 48 ಶ್ಲೋಕಗಳ ಸ್ತೋತ್ರವನ್ನು ರಚಿಸಿದವರು (4)

### ಜಿನ ಪದಬಂಧ–04ರ ಉತ್ತರಗಳು

ಮೇಲಿನಿಂದ ಕೆಳಕ್ಕೆ :
1) ಮಾನಸ 2) ವಜ್ರ 3) ಮಹಾಬಲಯ್ಯ
4) ಸಪ್ತ 5) ರಕ್ತೋದಾ 9) ಈರ್ಯಸಮಿತಿ
10) ಔಪಶಮಿಕ 13) ತ್ರಿಲೋಕಸಾರ
14) ಅರ್ಹಂತ 17) ಸುವಿಧಿ 18) ಕಪಿ
19) ತ್ರಸ

ಎಡದಿಂದ ಬಲಕ್ಕೆ :
1) ಮಾರ್ಧವ 4) ಸಗರ 6) ಸತ್ಯ
7) ಗುರುಬಸದಿ 8) ಕ್ಷುದಾ 11) ಅವಸರ್ಪಿಣಿ
12) ಷೋಡಶಸ್ವಪ್ನ 14) ಅಸಿ 15) ವಿಪಾಕಸೂತ್ರ
16) ಸುಮ 20) ತಕ್ಷಕ 21) ಸಮಾಧಿ

ರಚನೆ : ಎ.ಸಿ.ಇಂದಿರಾ ಜಯಕುಮಾರ್, ಶ್ರವಣಬೆಳಗೊಳ

## ಪ್ರಾಕೃತ ಕಲಿಯಿರಿ

ಪಾಇಯ ಸದ್ದಾಣಿ (ಪ್ರಾಕೃತ ಶಬ್ದಗಳು)

ಣಾಮ ಪದಾಣಿ (ನಾಮ ಪದಗಳು)

: ಪುಲ್ಲಿಂಗ :

| | ಏಕವಚನ | ಬಹುವಚನ |
|---|---|---|
| ಮೋಹನ | ➤ ಮೋಹಣೋ | – ಮೋಹಣಾ |
| ಅಜಿತ | ➤ ಅಜಿಯಣೋ | – ಅಜಿಯಾ |
| ಹರಿ | ➤ ಹರೀ | – ಹರಿಣೋ |
| ಶಶಿ | ➤ ಸಸೀ | – ಸಸೀಣೋ |
| ರಘು | ➤ ರಹೂ | – ರಹುಣೋ |
| ಗುರು | ➤ ಗುರೂ | – ಗುರುಣೋ |

: ಸ್ತ್ರೀಲಿಂಗ :

| | ಏಕವಚನ | ಬಹುವಚನ |
|---|---|---|
| ಸೀತೆ | ➤ ಸೀಯಾ | – ಸೀಯಾಓ |
| ರಮಾ | ➤ ರಮಾ | – ರಮಾಓ |
| ಬ್ರಾಹ್ಮೀ | ➤ ಬಂಭೀ | – ಬಂಭಿಓ |
| ರೇವತಿ | ➤ ರೇವಈ | – ರೇವಈಓ |
| ಹಸು | ➤ ಧೇಣೂ | – ಧೇಣೂಓ |
| ರೇಣು | ➤ ರೇಣೂ | – ರೇಣೂಓ |

: ನಪುಂಸಕಲಿಂಗ :

| | ಏಕವಚನ | ಬಹುವಚನ |
|---|---|---|
| ಪುಸ್ತಕ | ➤ ಪೊತ್ಥಗಂ | – ಪೊತ್ಥಗಾಣಿ |
| ನಗರ | ➤ ಣಯರಂ | – ಣಯರಾಣಿ |
| ಗೃಹ | ➤ ಗಿಹಂ | – ಗಿಹಾಣಿ |
| ಮಾವು | ➤ ಅಂಬಂ | – ಅಂಬಾಣಿ |
| ನದಿ | ➤ ಣಈ | – ಣಯಾಣಿ |
| ವಸ್ತು | ➤ ವತ್ಥೂ | – ವತ್ಥೂಣಿ |


## ಭಾವಪೂರ್ಣ ಶ್ರದ್ಧಾಂಜಲಿ



ಜನನ 29–06–1957 ನಿಧನ 26–10–2023

ಶ್ರೀ ಅಶೋಕ ಗುಂಡಪ್ಪ ಚೌಗುಲೆ

ಪಾಟೀಲ ಗಲ್ಲಿ, ಬೆಳಗಾವಿ

ಇವರು ದಿನಾಂಕ 26–10–2023 ಗುರುವಾರದಂದು ತಮ್ಮ 66ನೇ ವಯಸ್ಸಿನಲ್ಲಿ ನಿಧನರಾದರು. ಅಗಲಿದ ಆತ್ಮಕ್ಕೆ ಚಿರಶಾಂತಿಯನ್ನು ಕೋರುವವರು

* ದುಃಖಭಾಗಿಗಳು *

ಪತ್ನಿ : ಶ್ರೀಮತಿ ಸುವರ್ಣಾ ಅಶೋಕ ಚೌಗುಲೆ
ಮಗ : ಶೀತಲ, ಸೊಸೆ : ಶ್ರೀಲತಾ
ಮೊಮ್ಮಗಳು : ಕು. ರಿದ್ಧಿ,
ಚೌಗುಲೆ ಪರಿವಾರ, ಪಾಟೀಲ ಗಲ್ಲಿ, ಬೆಳಗಾವಿ ಹಾಗೂ ಸಮಯ ಪರಿವಾರ, ಹತ್ತರಗಿ ಮತ್ತು ಅಪಾರ ಬಂಧು–ಬಳಗ

## ಭಾವಪೂರ್ಣ ಶ್ರದ್ಧಾಂಜಲಿ



ದಿ|| ಶ್ರೀಮತಿ ಸರೋಜಮ್ಮ ಎಸ್.ಬಿ.

(ದಿ|| ಶ್ರೀ ವಜ್ರಕುಮಾರ್‌ರವರ ಪತ್ನಿ) ಶ್ರವಣಬೆಳಗೊಳ

ನಿಧನ : 30–10–2023

ಇವರು ದಿನಾಂಕ 30–10–2023 ಮಂಗಳವಾರದಂದು ನಿಧನರಾದರು. ಅಗಲಿದ ಆತ್ಮಕ್ಕೆ ಚಿರಶಾಂತಿಯನ್ನು ಪ್ರಾರ್ಥಿಸುವವರು

* ದುಃಖತಪ್ತರು *

ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು ಮತ್ತು ಬಂಧು–ಬಳಗ

## 10ನೇ ವರ್ಷದ ಪುಣ್ಯಸ್ಮರಣೆ



ಜನನ 02–08–1930 ನಿಧನ 19–11–2013

ಶ್ರೀ ನಡಗುತ್ತು ಜಿನರಾಜ ಅಜ್ರಿ

ಮಾಜಿ ಅಧ್ಯಕ್ಷರು, ದಿಗಂಬರ ಮಹಾವೀರ ಸಂಘ, ವಿಮಾನಪುರ, ಬೆಂಗಳೂರು ಹಾಗೂ ಮಾಜಿ ಎನ್.ಜಿ.ಇ.ಎಫ್.

ನೀವು ನಮ್ಮನ್ನಗಲಿ 10 ವರ್ಷಗಳು ಸಂದರೂ ನಿಮ್ಮ ನೆನಪು ಇನ್ನೂ ಹಚ್ಚ ಹಸಿರಾಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

* ಪ್ರೀತಿಯಿಂದ ನೆನೆಯುತ್ತಿರುವವರು *

ಮಕ್ಕಳು ಮತ್ತು ಅವರ ಕುಟುಂಬ, ಮೊಮ್ಮಕ್ಕಳು, ಕುಟುಂಬ ಸಂಬಂಧಿಗಳು, ಬೆಂಗಳೂರು

## 7ನೇ ವರ್ಷದ ಪುಣ್ಯಸ್ಮರಣೆ



ಜನನ 02–08–1987 ನಿಧನ 23–11–2016

ಶ್ರೀ ಅಭಿನಂದನ ಅಪ್ಪಾಸಾಹೇಬ ನಾಯಿಕ

ನೀನು ನಮ್ಮನ್ನು ಬೌದ್ಧಿಕವಾಗಿ ಅಗಲಿ 7 ವರ್ಷಗಳಾಯ್ತು. ಅದು ನಮಗೆ 7 ಯುಗಗಳಂತೆ ಭಾಸವಾಗುತ್ತಿದೆ. ಉನ್ನತ ಲೋಕದಲ್ಲಿ ನಿನ್ನ ಆತ್ಮ ಚಿರಶಾಂತಿಯನ್ನು ಹೊಂದಲಿ. ಜ್ಞಾನವನ್ನು ಹೊಂದಲು ಮತ್ತು ಸದಾ ಉನ್ನತೋನ್ನತೆ ಧ್ಯೇಯಗಳನ್ನು ಹೊಂದಲಿ ಎಂಬುದು ನಮ್ಮ ಶುಭ ಹಾರೈಕೆ...

* ಸದಾ ನಿನ್ನ ನೆನಪಿನಲ್ಲಿ *

ಶ್ರೀಮತಿ ಮತ್ತು ಶ್ರೀ ಸರೋಜಿನಿ ಅಪ್ಪಾಸಾಹೇಬ ನಾಯಿಕ ಹಿಡಕಲ್, (ಆರ್.ವ್ಹಿ. ಕಾಲೇಜು ರಸ್ತೆ,) ರಾಯಬಾಗ. ಮತ್ತು ಬಂಧು ಬಳಗ–ಗೆಳೆಯರು

# ಶ್ರವಣಬೆಳಗೊಳದಲ್ಲಿ ತ್ಯಾಗಿವೃಂದದ ಪಿಂಚಿ ಪರಿವರ್ತನಾ ಕಾರ್ಯಕ್ರಮ







**ಶ್ರವಣಬೆಳಗೊಳ, ನ.13 :** ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಚಾತುರ್ಮಾಸ ಆಚರಿಸಿದ ಪರಮಪೂಜ್ಯ ಮುನಿಶ್ರೀಯವರ ಹಾಗೂ ಸಮಸ್ತ ಸಾಧು ವೃಂದದ ಪಿಂಚಿ ಪರಿವರ್ತನಾ ಕಾರ್ಯಕ್ರಮವು ಭಂಡಾರಿ ಹುಳ್ಳ ಸಭಾ ಮಂಟಪದಲ್ಲಿ ಜರುಗಿತು. ಶ್ರೀಮಠದ ಬಸದಿಯಲ್ಲಿ ಚಾತುರ್ಮಾಸ ಕಳಸ ವಿಸರ್ಜನೆಯ ನಂತರ ಮೆರವಣಿಗೆಯ ಮೂಲಕ ಪಿಂಚಿಗಳನ್ನು ಸಭಾ ಮಂಟಪಕ್ಕೆ ತರಲಾಯಿತು. ಪರಮಪೂಜ್ಯ ತ್ಯಾಗಿಗಳಿಗೆ ಪ.ಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯ ಮಹಾಸ್ವಾಮಿಗಳವರು ಪಾದಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಧರ್ಮಬಂಧುಗಳು ತ್ಯಾಗಿಗಳಿಗೆ ಅರ್ಘ್ಯ, ಶಾಸ್ತ್ರ, ಜಪಮಾಲೆ ಮತ್ತು ಮಾತಾಜಿಯವರಿಗೆ ವಸ್ತ್ರದಾನ ಮಾಡಿ ಭಕ್ತಿ ಸಮರ್ಪಿಸಿದರು.

# ಜಾರುಗುಪ್ಪೆ ಪಾರ್ಶ್ವನಾಥಸ್ವಾಮಿ ದೇವಸ್ಥಾನದ 125ನೇ ವರ್ಷದ ಪ್ರತಿಷ್ಠಾಪನಾ ಮಹೋತ್ಸವ



**ಶ್ರವಣಬೆಳಗೊಳ, ನ.4 :** ಜಾರುಗುಪ್ಪೆ ಭ. 1008 ಶ್ರೀ ಪಾರ್ಶ್ವನಾಥಸ್ವಾಮಿ ದೇವಸ್ಥಾನ ಸೇವಾ ಸಮಿತಿ, ಶ್ರೀ ಜಿ.ಕೆ. ಪದ್ಮರಾಜಯ್ಯ ಮತ್ತು ಶ್ರೀ ಜಿ.ಕೆ. ಧರಣೇಂದ್ರಯ್ಯ ಟ್ರಸ್ಟ್, ಶ್ರವಣಬೆಳಗೊಳ ಇವರ ವತಿಯಿಂದ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರ ಮಾರ್ಗದರ್ಶನದಲ್ಲಿ 125ನೇ ವರ್ಷದ ಪ್ರತಿಷ್ಠಾಪನಾ ಮಹೋತ್ಸವವು ನೆರವೇರಿತು. ಈ ಸಂದರ್ಭದಲ್ಲಿ ಜೈನ ಸಮಾಜದ ಹಿರಿಯ ನಾಗರಿಕರನ್ನು ಸನ್ಮಾನಿಸಿ ಗೌರವಿಸಲಾಯಿತು.

# ದೀಪಾವಳಿ ಹಬ್ಬದ ಪ್ರಯುಕ್ತ ಶ್ರೀಕ್ಷೇತ್ರಕ್ಕೆ ಕನಕಗಿರಿ ಶ್ರೀಗಳವರ ಭೇಟಿ



**ಶ್ರವಣಬೆಳಗೊಳ, ನ.12 :** ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ನಡೆದ ಭ. ಶ್ರೀ ಮಹಾವೀರ ಸ್ವಾಮಿ ನಿರ್ವಾಣೋತ್ಸವ ಹಾಗೂ ದೀಪಾವಳಿ ಹಬ್ಬದ ಪ್ರಯುಕ್ತ ಕನಕಗಿರಿ ಕ್ಷೇತ್ರದ ಪ.ಪೂ. ಸ್ವಸ್ತಿಶ್ರೀ ಭುವನಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರು ಹಾಗೂ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರು ದೀಪ ಪ್ರಜ್ವಲನೆ ಮಾಡುವ ಮೂಲಕ ದೀಪಾವಳಿ ಹಬ್ಬಕ್ಕೆ ಚಾಲನೆ ನೀಡಿದರು.

# ಜೈನ ದರ್ಶನದಲ್ಲಿ ಅನೇಕಾಂತವಾದ ಪುಸ್ತಕ ಬಿಡುಗಡೆ



**ಶ್ರವಣಬೆಳಗೊಳ, ನ.13 :** ಜೈನದರ್ಶನದಲ್ಲಿ ಅನೇಕಾಂತವಾದ ಒಂದು ಪರಿಶೀಲನೆ ಪುಸ್ತಕವನ್ನು ಶ್ರೀಕ್ಷೇತ್ರದಲ್ಲಿ ಜರುಗಿದ ಪೂಜ್ಯ ತ್ಯಾಗಿಗಳ ಪಿಂಚಿ ಪರಿವರ್ತನಾ ಸಮಾರಂಭದಲ್ಲಿ ಪರಮಪೂಜ್ಯ ಮುನಿಶ್ರೀಗಳವರು ಹಾಗೂ ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯ ಮಹಾಸ್ವಾಮಿಗಳವರು ಬಿಡುಗಡೆ ಮಾಡಿದರು. ಪ್ರೊ. ಜೀವಂಧರಕುಮಾರ ಕೆ. ಹೋತಪೇಟೆಯವರು ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿರುವ ಪುಸ್ತಕವನ್ನು ಶ್ರೀಕ್ಷೇತ್ರದ ಜೈನ ಅಧ್ಯಯನ ಸಂಸ್ಥೆಯು ಪ್ರಕಟಿಸಿದೆ.

# ಪ್ರಾಕೃತ ಕೋರ್ಸ್‌ಗಳಿಗಾಗಿ ಒಡಂಬಡಿಕೆ




**ಸುರತ್ಕಲ್, ಆ.10 :** ಶ್ರವಣಬೆಳಗೊಳದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯೊಂದಿಗೆ ಮಂಗಳೂರಿನ ಸಂತ ಆಲೋಶಿಯಸ್ ಕಾಲೇಜು ಪ್ರಾಕೃತ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಒಡಂಬಡಿಕೆ ಮಾಡಿಕೊಂಡಿತು. ಈ ಸಂದರ್ಭದಲ್ಲಿ ಸಂತ ಆಲೋಶಿಯಸ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಪ್ರವೀಣ್ ಮಾರ್ಟಿಸ್, ಕುಲಸಚಿವರಾದ ಡಾ. ಆಲ್ವಿನ್ ಡಿಸೋಜಾ, ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ಮೋನ ಮೆಂಡೋನಕಾ, ಪ್ರಾಕೃತ ಸಂಸ್ಥೆಯ ಡಾ. ರಾಜೇಂದ್ರ ಪಾಟೀಲ್, ಲೋಕಕುಮಾರ್ ಮತ್ತು ಸಂತ ಅಲೋಶಿಯಸ್ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸೂರತ್ಕಲ್‌ನ ಗೋವಿಂದ ದಾಸ ಕಾಲೇಜಿನ ವಿದ್ಯಾರ್ಥಿಗಳು ಹಾಜರಿದ್ದರು. ನಂತರ ವಿದ್ಯಾರ್ಥಿಗಳಿಗೆ ಪ್ರಾಕೃತ ತರಗತಿಗಳನ್ನು ತೆಗೆದುಕೊಳ್ಳಲಾಯಿತು.






ಬಾಹುಬಲಿ ಪ್ರಾಕೃತ ವಿದ್ಯಾಪೀಠ (ರಿ) ಸಂಚಾಲಿತ

## ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ

(ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನೆಗಾಗಿ ಮಾನ್ಯತೆ ಪಡೆದಿದೆ)

ಶ್ರೀಧವಲತೀರ್ಥಂ, ಶ್ರವಣಬೆಳಗೊಳ – 573 135. ಹಾಸನ ಜಿಲ್ಲೆ.







### ಕಾರ್ಯ ಯೋಜನೆಗಳು

* ಹಸ್ತಪ್ರತಿಗಳ ಸಂರಕ್ಷಣೆ, ಅನುವಾದ, ಸಂಪಾದನೆ ಮತ್ತು ಪ್ರಕಟಣೆ.
* ಶಾಸನಗಳ ಅಧ್ಯಯನ (ಶಿಲಾ ಮತ್ತು ತಾಮ್ರಪತ್ರ)
* ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ವಿಚಾರಗೋಷ್ಠಿ, ಸಮ್ಮೇಳನ ಮತ್ತು ಸಮಾವೇಶಗಳ ಆಯೋಜನೆ
* ದತ್ತಿ ಉಪನ್ಯಾಸ ಮಾಲಿಕೆ.
* ಸಂಶೋಧನಾ ವಿದ್ಯಾರ್ಥಿಗಳಿಗೆ ಸಹಾಯಧನ ಮತ್ತು ಶಿಷ್ಯವೇತನ
* ಪ್ರಾಕೃತ ಕೋರ್ಸ್‌ಗಳು ಮತ್ತು ಪರೀಕ್ಷೆಗಳ ಆಯೋಜನೆ :–

1) ಪ್ರಾಕೃತ ಸರ್ಟಿಫಿಕೇಟ್ 4) ಪ್ರಾಕೃತ ಮಧ್ಯಮ
2) ಪ್ರಾಕೃತ ಡಿಪ್ಲೊಮಾ 5) ಪ್ರಾಕೃತ ವಿಶಾರದ
3) ಪ್ರಾಕೃತ ಪ್ರಥಮ 6) ಪ್ರಾಕೃತ ರತ್ನ

ಹೆಚ್ಚಿನ ಮಾಹಿತಿಗೆ : ಮಹಾವೀರ್ ಆರ್.ಟಿ. 9611051798

### ಪ್ರಗತಿಯ ವಿವರಗಳು

* ಧವಲಾ–16, ಜಯಧವಲಾ–16 ಮತ್ತು ಮಹಾಧವಲಾ–07 ಹಾಗೂ ಗ್ರಂಥಪ್ರವೇಶ (ಧವಲಾ ಪೀಠಿಕೆ) ಸೇರಿ ಒಟ್ಟು 40 ಸಂಪುಟಗಳ ಅನುವಾದ, ಸಂಪಾದನೆ ಮತ್ತು ಪ್ರಕಟಣೆ.
* ಧವಲೇತರ ಗ್ರಂಥಗಳ ಪ್ರಕಟಣೆ : 35 ಸಂಪುಟಗಳು.
* ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಪ್ರಕಟಣೆ : 07 ಸಂಪುಟಗಳು.
* 2004ರಿಂದ 9,530 ವಿದ್ಯಾರ್ಥಿಗಳು ಪ್ರಾಕೃತ ಪರೀಕ್ಷೆಗಳಲ್ಲಿ ಉತ್ತೀರ್ಣ.
* ಅರ್ಹ ವಿದ್ಯಾರ್ಥಿಗಳಿಗೆ ಕೋರಿಕೆ ಮತ್ತು ಅಗತ್ಯತೆಯನುಸಾರ ವಿದ್ಯಾರ್ಥಿವೇತನ ವಿತರಣೆ.
* ಸಂಸ್ಥೆಯ ಮೂಲಕ ಸಂಶೋಧನೆ ಕೈಗೊಂಡ 12 ವಿದ್ಯಾರ್ಥಿಗಳು ಪಿಎಚ್.ಡಿ. ಪದವಿ ಪಡೆದಿರುತ್ತಾರೆ.
* ಮೂಲ ಪ್ರಾಕೃತ ಪಠ್ಯಗಳ ಪ್ರಕಟಣೆ : 05 ಸಂಪುಟಗಳು.
* ಪ್ರಾಕೃತ ಪರೀಕ್ಷೆಗಳಿಗಾಗಿ ಬೋಧನಾ ಸಾಮಗ್ರಿಗಳ ಪ್ರಕಟಣೆ.
* 16 ಪ್ರಾಕೃತ ಪರೀಕ್ಷಾ ಘಟಿಕೋತ್ಸವಗಳ ಆಯೋಜನೆ.
* ಜಾಗತಿಕ ಮಟ್ಟದಲ್ಲಿ 17 ಜನ ಪ್ರಖ್ಯಾತ ಪ್ರಾಕೃತ ವಿದ್ವಾಂಸರುಗಳಿಗೆ ಪ್ರಾಕೃತ ಜ್ಞಾನ ಭಾರತಿ ಅಂತರರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.


# ಪ್ರಾಕೃತ ಸಂಸ್ಥೆ ಪರಿಸರದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ



**ಶ್ರವಣಬೆಳಗೊಳ, ನ. 1 :** ಶ್ರೀಧವಲತೀರ್ಥಂನಲ್ಲಿರುವ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ 68ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮ್ಯಾನೇಜಿಂಗ್ ಟ್ರಸ್ಟಿ ಮಹಾವೀರ್ ಆರ್.ಟಿ., ಉಪ ನಿರ್ದೇಶಕರಾದ ಹಜಾರಿ ಪಾರ್ಶ್ವನಾಥ್, ಕಾರ್ಯನಿರ್ವಹಣಾಧಿಕಾರಿ ಡಾ. ಮುರಳಿ ಎಸ್.ವಿ. ಕುಲಸಚಿವ ಲೋಕಕುಮಾರ ಎನ್. ಹಾಗೂ ಸಂಸ್ಥೆಯ ಸಿಬ್ಬಂದಿಯವರು ಹಾಜರಿದ್ದರು

# ಪ್ರತಿಭಾ ಕಾರಂಜಿಯಲ್ಲಿ ವಿದ್ಯಾರ್ಥಿಗಳ ಸಾಧನೆ



**ಶ್ರವಣಬೆಳಗೊಳ, ನ. 6 :** ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಶ್ರೀಕ್ಷೇತ್ರದ ಅಂಬಿಕಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಪ್ರಥಮ–1, ದ್ವಿತೀಯ–2 ಹಾಗೂ ತೃತೀಯ–2 ಬಹುಮಾನಗಳನ್ನು ಪಡೆದಿದ್ದಾರೆ. ಪ್ರಥಮ ಬಹುಮಾನ ಪಡೆದ ಕುಮಾರಿ ಧವಳ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗೆ ಆಯ್ಕೆಯಾಗಿದ್ದು, ಸಂಸ್ಥೆಯ ಅಧ್ಯಕ್ಷರಾದ ಪ.ಪೂ. ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ಆಶೀರ್ವದಿಸಿದರು. ಎಸ್.ಎಸ್.ಡಿ.ಜೆ.ಜೆ.ಪಿ.ಸಂಘದ ಕಾರ್ಯದರ್ಶಿಗಳಾದ ಬಬನ್, ಮುಖ್ಯೋಪಾಧ್ಯಾಯರಾದ ಪದ್ಮಶ್ರೀ ಗಿರೀಶ್ ಹಾಗೂ ಶಿಕ್ಷಕರು ಅಭಿನಂದನೆ ಸಲ್ಲಿಸಿದ್ದಾರೆ.

# ದೀಪಾವಳಿ ಪ್ರಯುಕ್ತ ಶ್ರೀಗಳವರಿಂದ ಶ್ರೀಕ್ಷೇತ್ರದಲ್ಲಿ ಸಿಹಿ ವಿತರಣೆ

**ಶ್ರವಣಬೆಳಗೊಳ, ನ. 12 :** ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ದೀಪಾವಳಿಯ ಸಂದರ್ಭದಲ್ಲಿ ಶ್ರೀಕ್ಷೇತ್ರದ ಶಾಸ್ತ್ರೀಗಳು, ಪ್ರತಿಷ್ಠಾಚಾರ್ಯರು, ಪುರೋಹಿತರಿಗೆ ಮತ್ತು ಕ್ಷೇತ್ರದ ಶಿಕ್ಷಣ ಸಂಸ್ಥೆಗಳು, ಬಾಹುಬಲಿ ಆಸ್ಪತ್ರೆ, ಎಸ್‌ಡಿಜೆಎಂಐ ಮ್ಯಾನೇಜಿಂಗ್ ಕಮಿಟಿ ಟ್ರಸ್ಟ್ (ರಿ) ಸದಸ್ಯರು ಹಾಗೂ ಕಾರ್ಯಕರ್ತರುಗಳಿಗೆ, ಸಿಬ್ಬಂದಿಗಳಿಗೆ ಮತ್ತು ಶ್ರವಣಬೆಳಗೊಳದ ಗ್ರಾಮ ಪಂಚಾಯಿತಿಯ ಸರ್ವ ಸದಸ್ಯರುಗಳು, ಸಿಬ್ಬಂದಿಯವರು, ಸರ್ಕಾರಿ ಆಸ್ಪತ್ರೆ, ಪೋಲೀಸ್ ಠಾಣೆ, ವೃದ್ಧಾಶ್ರಮ, ಬ್ಯಾಂಕುಗಳು, ಚೆಸ್ಕಾ–ಎಂಯುಎಸ್ ವಿದ್ಯುಚ್ಛಕ್ತಿ ಘಟಕದ ಸಿಬ್ಬಂದಿ ವರ್ಗದವರಿಗೆ ಸಿಹಿ ವಿತರಿಸಿ, ಆಶೀರ್ವಾದ ನೀಡಿ ಹಬ್ಬದ ಶುಭ ಹಾರೈಸಿದರು.

Edited, Printed & Published by : Charukeerthi Bhattaraka Swamiji and Owned by Shri Digambar Jain Matha, S.D.J.M.I. Managing Committee Trust (R), Shravanabelagola-573 135.
Printer : Omkar Offset Printers, Bangalore Email : gommatavani1980@gmail.com Gommatavani Office Contact No. : 8660118443